## ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಶೋರಾಪುರ.

## ಸಿ.ಸಿ. ನಂ.210/2022

| | | |
|---|---|---|
| ಸಾಕ್ಷಿದಾರರ ಹೆಸರು | ಃ ಮಾನಪ್ಪ | ಸಿ.ಡಬ್ಲೂ ಃ 06 |
| ತಂದೆ ಹೆಸರು | ಃ ಅಂಬ್ಲಪ್ಪ ಅಮ್ಮಾಪೂರ | ಪಿ.ಡಬ್ಲೂ ಃ 02 |
| ವಯಸ್ಸು | ಃ 35 ವರ್ಷ | |
| ವೃತ್ತಿ | ಃ ಕೂಲಿ ಕೆಲಸ | |
| ವಾಸ ಸ್ಥಳ | ಃ ಮಾಲಗತ್ತಿ | |

**ಸಾಕ್ಷಿಗೆ ಇಂದು ದಿನಾಂಕಃ 17.02.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ಚಾಸಾ 1 ನನ್ನ ತಂಗಿ ಆಗಬೇಕು. ಚಾಸಾ 2 ರಿಂದ 4 ರವರ ಪರಿಚಯ ಇರುತ್ತದೆ. ಚಾಸಾ 5 ನನ್ನ ತಾಯಿ. ಚಾಸಾ 7 ರಿಂದ 10 ರವರ ಪರಿಚಯ ಇರುತ್ತದೆ. ಆರೋಪಿ ನನ್ನ ತಂಗಿಯ ಗಂಡನಾಗಬೇಕು. ನನ್ನ ತಂಗಿಯ ಮದುವೆ ಆರೋಪಿ ಜೋತೆ ಆಗಿರುತ್ತದೆ. ದಿನಾಂಕ 20.02.2020 ರಂದು ಕೊಟ್ಟುರು ಬಸವೇಶ್ವರ ದೇವಸ್ಥಾನದಲ್ಲಿ ನನ್ನ ತಂಗಿ ಮತ್ತು ಆರೋಪಿತನ ಮದುವೆಯಾಗಿರುತ್ತದೆ. ಮದುವೆಯಾಗುವುದಕ್ಕಿಂತ ಮುಂಚೆ ನಿಶ್ಚಿತಾದದ ಸಮಯದಲ್ಲಿ ರೂ. 1 ಲಕ್ಷ ಮತ್ತು 5 ತೊಲ ಬಂಗಾರ ಕೇಳಿರುತ್ತಾರೆ. ನಮ್ಮ ತಂದೆ-ತಾಯಿ ಅಷ್ಟು ವರದಕ್ಷಿಣೆ ಕೊಡಲಾಗುವುದಿಲ್ಲ ಅಂತ ಹೇಳಿದರು. ಆವಾಗ ರೂ.50,000/- ಮತ್ತು 3 ತೊಲ ಬಂಗಾರ ಕೊಡಲು ತಿಳಿಸಿರುತ್ತಾರೆ. ಮದುವೆಯಾಗುವ ಕಾಲಕ್ಕೆ ಸದರಿ ರೂ.50,000/- ಮತ್ತು 3 ತೊಲ ಬಂಗಾರ ಮದುವೆ ಸಮಯದಲ್ಲಿ ಕೊಟ್ಟಿರುತ್ತಾರೆ. ಮದುವೆ ಆದ ಸ್ವಲ್ಪ ದಿನ ಚನ್ನಾಗಿದ್ದರು. ನಂತರ ನಾವೂ ಕೇಳಿದಷ್ಟು ಹಣ ತಂದಿಲ್ಲವೆಂದು ಆರೋಪಿ, ಆತನ ತಂದೆ-ತಾಯಿ ಮತ್ತು ಸಹೋದರರು ವರದಕ್ಷಿಣೆ ಕಿರುಕುಳ ಕೊಡಲು ಪ್ರಾರಂಭಿಸಿದರು. ನನ್ನ ತಂಗಿ ಇಂದು ಸರಿ ಹೋಗಬಹುದು ನಾಳೆ

ಸರಿ ಹೋಗಬಹುದು ಎಂದು ಸುಮ್ಮನೆ ಇದ್ದಳು. ನಂತರ ನನ್ನ ತಂಗಿ ಬಾಣಂತನಕ್ಕೆ ಬರುತ್ತಾಳೆ. ಆ ಸಮಯದಲ್ಲಿ ನನ್ನ ತಂಗಿ ಎಲ್ಲ ವಿಷಯಮನ್ನು ತಿಳಿಸಿರುತ್ತಾಳೆ. ನಂತರ ಮಗು ಹುಟ್ಟಿದ ನಂತರ ಸರಿ ಹೋಗಬಹುದು ಅಂತ ನನ್ನ ತಂಗಿಯನ್ನು ಗಂಡನ ಮನೆಗೆ ಕಳುಹಿಸಿರುತ್ತೇವೆ. ಮತ್ತೆ ಅದೇ ರೀತಿ ಕಿರುಕುಳ ಕೊಡಲು ಪ್ರಾರಂಭಿಸಿರುತ್ತಾರೆ. ನಂತರ ಮತ್ತೆ 1 ರಿಂದ 4 ನೇ ಆರೋಪಿತರು ರೂ.2,00,000/- ಹಣ ತಂದು ಕೊಡಬೇಕೆಂದು ಕಿರುಕುಳ ಕೊಟ್ಟು ಹೊಡೆಬಡೆ ಮಾಡಿ ಮನೆಯಿಂದ ಹೊರ ಹಾಕಿರುತ್ತಾರೆ. ನಂತರ ದಿನಾಂಕ 04.12.2021 ರಂದು 5 ಗಂಟೆ ಸುಮಾರಿಗೆ ಆರೋಪಿತರು ನನ್ನ ತಂಗಿಯನ್ನು ಕರೆಯಲು ನಮ್ಮ ಊರಿಗೆ ಬಂದಿರುತ್ತಾರೆ. ನನ್ನ ತಂಗಿಯ ಗಂಡ ನನ್ನ ತಂಗಿಗೆ ವರದಕ್ಷಿಣೆ ಮತ್ತು ಬಂಗಾರ ತರಲು ಹೇಳಿದರು ನೀನು ತಂದಿರುವುದಿಲ್ಲ ಅಂತ ಕಪಾಳಕ್ಕೆ ಹೊಡೆದಿರುತ್ತಾನೆ. ಅವರ ತಾಯಿ ಕೂದಲು ಹಿಡಿದು ಎಳೆದಾಡಿ ನಿನ್ನ ಸೊಕ್ಕು ಬಹಳ ಆಗಿದೆ ಅಂತ ಅಂದಿರುತ್ತಾಳೆ. ಮಾವ ಮತ್ತು ಮೈದುನ ಸಹ ನನ್ನ ತಂಗಿಗೆ ಹೊಡೆದಿರುತ್ತಾರೆ. ಅದೇ ಸಮಯಕ್ಕೆ ನಾನು ಜಗಳ ಬಿಡಿಸಿ ಸಮಾದಾನ ಮಾಡಿರುತ್ತೇನೆ. ಇನ್ನೊಂದು ಸಾರಿ ಬರುವಷ್ಟರಲ್ಲಿ ಹಣ ಮತ್ತು ಬಂಗಾರ ಕೊಡದಿದ್ದರೆ ನಿನ್ನನು ಜೀವಸಹಿತ ಬಿಡುವುದಿಲ್ಲ ಎಂದು ಜೀವ ಬೇದರಿಕೆ ಹಾಕಿರುತ್ತಾರೆ. ನಾನು ಆ ಕುರಿತು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲು ಃ ಶ್ರೀ ವೈ.ಹೆಚ್ ವಕೀಲರಿಂದಃ**

ಆರೋಪಿತನ ತಂದೆ ತಾಯಿ ನನಗೆ ಅತ್ತೆಮಾವ ಆಗಬೇಕು ಅಂದರೆ ಸರಿ. ಮದುವೆ ಸಮಯದಲ್ಲಿ 3 ತೊಲ ಬಂಗಾರ ರೂ. 50,000/- ಹಣ ಕೊಟ್ಟರುತ್ತೇವೆ. ಸದರಿ ಹಣವನ್ನು ಮದುವೆ ದಿನದಂದು ನಗದು ರೂಪದಲ್ಲಿ ಕೊಟ್ಟಿರುತ್ತೇವೆ. ಸದರಿ ಹಣ ಎಷ್ಟು ಮುಖಬೆಲೆಯ ನೋಟುಗಳು ಇದ್ದವು ಅಂತ ನನಗೆ ಗೊತ್ತಿಲ್ಲ. ಸದರಿ ಹಣವನ್ನು ವೇದಿಕೆ ಮೇಲೆ ಕೊಟ್ಟಿರುತ್ತೇವೆ. ಆದರೆ ಪೋಟೊ ತೆಗೆದಿರುವುದಿಲ್ಲ. ಸದರಿ ಹಣ ಕೊಡುವ ಸಮಯದಲ್ಲಿ ಸಾಕಷ್ಟು ಜನ ಇದ್ದರು. ಅವರು ಯಾರು ಅಂತ ಹೇಳಲು ಆಗುವುದಿಲ್ಲ. ಸದರಿ ಹಣ ಕೊಡುವಾಗ ನಮ್ಮ ಸಂಬಂಧಿಕರಾದ ಮಾಳಪ್ಪ ಎನ್ನುವವರು ಇದ್ದರು. ಸದರಿ 3 ತೊಲೆಯ ಉಂಗುರಗಳು ಇದ್ದವು. ಆ ಸಮಯದಲ್ಲಿ

ಬಂಗಾರ ಎಷ್ಟು ಇತ್ತು ಅಂತ ನನಗೆ ಗೊತ್ತಿರುವುದಿಲ್ಲ. ರಶೀದಿಗಳನ್ನು ಹಾಜರುಪಡಿಸಿರುವುದಿಲ್ಲ.

ನಾನು 10 ನೇ ತರಗತಿ ಓದಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ನಾನು ಕೂಲಿ ಕೆಲಸ ಮಾಡುತ್ತೇನೆ. ನಾವೂ 3 ಜನ ಅಣ್ಣತಮ್ಮಂದಿರು. ನಾವೂ 3 ಜನ ಅಣ್ಣತಮ್ಮಂದಿರಿಗೆ ವರ್ಷಕೆ 10 ಲಕ್ಷ ಆದಾಯ ಇದೆ ಎಂದರೆ ಸರಿಯಲ್ಲ. ನನ್ನ ತಂಗಿಯ ಮದುವೆ ಸಮಯದಲ್ಲಿ ನಮ್ಮ ಮನೆಯಲ್ಲಿ ಹಣ ಇಲ್ಲದೆ ಇರುವುದಂರಿದ ಆರೋಪಿ ಕಡೆಯಿಂದ ರೂ.1 ಲಕ್ಷ ತೆಗೆದುಕೊಂಡು ಮದುವೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂಗಿಗೆ ಯಾವುದೇ ಕಿರುಕುಳ ಕೊಟ್ಟಿರುವುದಿಲ್ಲ. ಸದರಿ ಹಣವನ್ನು ಕೇಳಿದ್ದಕಾಗಿ ದೂರನ್ನು ನೀಡಿರುತ್ತೇವೆ ಅಂದರೆ ಸರಿಯಲ್ಲ. ನನ್ನ ತಂಗಿಗೆ ಪೆಟ್ಟಾದ ಬಗ್ಗೆ ಯಾವುದೇ ಆಸ್ಪತ್ರೆಗೆ ತೋರಿಸಿರುವುದಿಲ್ಲ.

ದೂರನ್ನು ಕೊಡಲು ನಾನು ನನ್ನ ತಂಗಿ ಮತ್ತು ತಾಯಿ ಹೋಗಿದ್ದೇವು. ಸದರಿಯವರನ್ನು ಹೊರತುಪಡಿಸಿ ನಾಗರಾಜ ಎನ್ನುವವರು ನನ್ನ ಮಾವ ಇದ್ದರು. ಸದರಿ ನಾಗರಾಜ ತೀರಿಕೊಂಡಿರುತ್ತಾರೆ. ನನ್ನ ತಂಗಿಯ ಡೇಲಿವರಿಯಾದ ನಂತರ ಆರೋಪಿತರು ಮಗು ನೋಡಲು ಬಂದಿದ್ದರು ಎಂದರೆ ಸರಿಯಲ್ಲ. ಮಗುವನ್ನು ನೋಡಲು ಬಂದಾಗ ವಿನಾಕಾರಣ ಜಗಳ ತೆಗೆದು ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ. ಮದುವೆ ಸಮಯದಲ್ಲಿ ನಾವೂ ಕೊಟ್ಟಂತಹ ಹಣ ಕೇಳಿದ್ದಕ್ಕಾಗಿ ನಾವು ವರದಕ್ಷಿಣೆ ಕೇಸ್ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೂ ಮತ್ತು ನನ್ನ ತಂಗಿಗೆ ಹೊಂದಾಣಿಕೆ ಆಗದೆ ಇರುವ ಕಾರಣ ನಾನು ಸುರಪುರದಲ್ಲಿ ಮನೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ರೀತಿ ಹೊಡೆ ಬಡೆ ಮಾಡಿರುವುದಿಲ್ಲ, ಜೀವಬೆದರಿಕೆ ಹಾಕಿರುವುದಿಲ್ಲ, ವರದಕ್ಷಿಣೆ ಕಿರುಕುಳ ಕೊಟ್ಟಿರುವುದಿಲ್ಲ, ಹಣ ಕೇಳಿದ್ದಕ್ಕಾಗಿ ನಾವು ಸುಳ್ಳು ಪ್ರಕರಣದ ದಾಖಲಿಸಿದ್ದೆವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ** ಇಲ್ಲ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.